**2 ಸಿವಿಲ್ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 439/2016
ಪಿ.ಡಬ್ಲ್ಯೂ : 2

ದಿನಾಂಕಃ 24-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿಯವರ ಪರವಾಗಿ ಶ್ರೀ ವೈ ಎಸ್ಎಸ್. ಯವರಿಂದ

1. ಇಜಕ್ ಪಾಶನಾ, ಸುಧಾಕರ,ಜೇಮ್ಸ್ ದಿನೇಶ್ ಪಾಶನ್ ರವರು ನಮ್ಮ ಮನೆಯ ಹತ್ತಿರ ಮನೆ ಇರುತ್ತದೆ. ಅರಾಟೆಯ ರಾಷ್ಟ್ರೀಯ ಹೆದ್ದಾರಿಯಿಂದ ಅರಾಟೆಯ ಕಳುವಿನ ಬಾಗಿಲು ರಸ್ತೆಯ ದಕ್ಷಿಣಕ್ಕೆ ದಿಕ್ಕಿಗೆ ನಮ್ಮ ಮನೆಗಳು ಬರುತ್ತದೆ. ನಮ್ಮ ಮನೆಗಳು ಆ ರಸ್ತೆಯಿಂದ ಸುಮಾರು 500 ಮೀ ದೂರದಲ್ಲಿ ಇರುತ್ತದೆ. ಅರಾಟೆಯ ಉಮ್ಮಲ್ತಿ ಮನೆ ದೇವಸ್ಥಾನದ ಮೂಲಕ ನಮ್ಮ ಮನೆಗೆ ರಸ್ತೆ ಇದೆ ಎಂದರೆ ಸಾಕ್ಷಿ ಆ ರಸ್ತೆ ಅರ್ಧಕ್ಕೆ ಬಂದು ನಿಂತಿರುತ್ತದೆ ಎಂದು ನುಡಿಯುತ್ತಾರೆ. ಆ ರಸ್ತೆ ಅಲ್ಲಿ ನಿರ್ಮಾಣ ಆದರೆ ನಮ್ಮ ಮನೆಯಿಂದ ಸುಮಾರು 100 ಮೀ ಅಂತರ ಇರುತ್ತದೆ.

2. ನಮಗೆ ಉಮ್ಮಲ್ತಿ ಮನೆ ದೇವಸ್ಥಾನದ ರಸ್ತೆ ಇದ್ದರೆ ದಾವಾ ಸ್ವತ್ತು ಉಪಯೋಗಕ್ಕೆ ಬರುವುದಿಲ್ಲ ಎಂದರೆ ಸಾಕ್ಷಿ ನಾವು ದಾವಾ ಸ್ವತ್ತನ್ನು ಉಪಯೋಗಿಸುತ್ತೇವೆ ಎಂದು ನುಡಿಯುತ್ತಾರೆ. ಪುನಃ ಸಾಕ್ಷಿ ಅದು ನಮ್ಮ ಮನೆಯಿಂದ ತುಂಬಾ ದೂರ ಆಗುತ್ತದೆ ಎಂದು ನುಡಿಯುತ್ತಾರೆ. ಅರಾಟೆ ರಸ್ತೆಯಿಂದ ಪ್ರಥಮವಾಗಿ 5 ನೇ ವಾದಿಯವರ ಮನೆ ಸಿಗುತ್ತದೆ. ಆ ನಂತರ ಸುಧಾಕರರವರ ಮನೆ, ನಂತರ ನನ್ನ ಮನೆ, ಆ ನಂತರ ಜೇಮ್ಸ್‌ರವರ ಮನೆ, ಆನಂತರ ಇಜಾಕ್ ರವರ ಮನೆ ಬರುತ್ತದೆ.

3. ಅರಾಟೆ ರಸ್ತೆಯಿಂದ ದಿನೇಶ್ ರವರ ಮನೆಗೆ 100 ಮೀ ಅಂತರ ಇರುತ್ತದೆ. ದಿನೇಶ್ ಪಾಶನಾರವರ ಮನೆಯಿಂದ ಸುಧಾಕರ್ ರವರ ಮನೆಗೆ 100 ಮೀ ಅಂತರ ಇರುತ್ತದೆ. ಸುಧಾಕರ್ ಮನೆಯಿಂದ ನಮ್ಮ ಮನೆಗೆ 10 ಮೀ ಅಂತರ ಇರುತ್ತದೆ. ನಮ್ಮ ಮನೆಯಿಂದ ಜೇಮ್ಸ್‌ರವರ ಮನೆಗೆ 10 ಮೀ ಅಂತರ ಇರುತ್ತದೆ. ಜೇಮ್ಸ್‌ರವರ ಮನೆಯಿಂದ ಇಜಾಕ್ ರವರ ಮನೆಗೆ 10 ಮೀ ಅಂತರ ಇರುತ್ತದೆ. ನಮ್ಮ ಮನೆಯಿಂದ ಉಮ್ಮಲ್ತಿ ದೇವಸ್ಥಾನದ ಮನೆ ಹತ್ತಿರ ಇದ್ದು, ಅರಾಟೆ ಕಳುವಿನ ರಸ್ತೆ ದೂರ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಅರಾಟೆ ಕಳುವಿನ ರಸ್ತೆ ನಮ್ಮ ಮನೆಗೆ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ.

4. ಕರಿಯರವರ ಜಾಗದಿಂದ ದಿನೇಶ್ ಪಾಶಾನರವರ ಮನೆಯ ನಡುವೆ ಯಾವ ಜಾಗ ಇರುತ್ತದೆ ಎಂದರೆ ಸಾಕ್ಷಿ ಮೊದಲು ಗಿರಿಜ ಮೋಗೆರ್ತಿರವರ ಮನೆ ಜಾಗ ಇರುತ್ತದೆ ಎಂದು ನುಡಿದು, ಕರಿಯರವರ ಜಾಗದ ನಂತರ ಅರಾಟೆ ಕಳುವಿನ ಬಾಗಿಲು ರಸ್ತೆ ಇರುತ್ತದೆ, ರಸ್ತೆ ಆದ ನಂತರ ಗಿರಿಜಾರವರ ಮನೆ ಜಾಗ ಇರುತ್ತದೆ. ನಮ್ಮ ಪ್ರಕಾರ ಕರಿಯರವರ ಜಾಗವು ರಸ್ತೆಯ ಉತ್ತರ ದಿಕ್ಕಿನಲ್ಲಿರುತ್ತದೆ.

5. ಸಾಕ್ಷಿಗೆ ಈಗ ನಿ.ಪಿ.22 ರ ನಕಾಶೆಯನ್ನು ತೋರಿಸಿ ಕರಿಯರವರ ಜಾಗ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿ ಉತ್ತರದಲ್ಲಿ ಕರಿಯರವರ ಜಾಗ, ದಕ್ಷಿಣದಲ್ಲಿ ಗಿರಿಜಾರವರ ಜಾಗ ಇದ್ದು, ಗಿರಿಜಾರವರ ಜಾಗದಲ್ಲಿ ರಸ್ತೆ ಹಾದು ಹೋಗಿರುತ್ತದೆ. ಅದು ಅರಾಟೆ ರಾಷ್ಟ್ರೀಯ ಹೆದ್ದಾರಿಯಿಂದ ಕಳುವಿನ ಬಾಗಿಲಿಗೆ ಹೋಗುವ ರಸ್ತೆ ಆಗಿರುತ್ತದೆ. ನಿ.ಪಿ.22 ರ ನಕಾಶೆಯಲ್ಲಿ ಕರಿಯರವರ ಜಾಗದಲ್ಲಿ ರಸ್ತೆ ಹಾದು ಹೋಗುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿ ಅದು ಸರಿಯಲ್ಲ, ಗಿರಿಜಾರವರ ಜಾಗದಲ್ಲಿ ಆ ರಸ್ತೆ ಹೋಗುತ್ತದೆ ಎಂದು ನುಡಿಯುತ್ತಾರೆ.

6. ನಾವು ಕರಿಯಾ ಹಾಗೂ ಗಿರಿಜಾರವರ ಜಾಗದಲ್ಲಿ ರಸ್ತೆ ಕೇಳುತ್ತಿಲ್ಲ. ಈ ದಾವೆಯಲ್ಲಿ ಏನು ನಿವೃತ್ತಿ ಕೇಳುತ್ತಿದ್ದೀರಿ ಎಂದರೆ ಸಾಕ್ಷಿ ರಸ್ತೆಗಾಗಿ ದಾವೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ನಾವು ಯಾರ ಜಾಗದಲ್ಲಿ ರಸ್ತೆ ಆಗಬೇಕು ಅಂತ ಕೇಳುತ್ತಿಲ್ಲ, ಹೊಳೆಯ ಬದಿಯಲ್ಲಿ ರಸ್ತೆ ಆಗಬೇಕು ಅಂತ ಕೇಳುತ್ತಿದ್ದೇವೆ. ಈ ದಾವೆಯಲ್ಲಿ ಏನು ಪರಿಹಾರ ಕೇಳಿರುತ್ತೇವೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿಗೆ ನಿ.ಪಿ.38 ರ ಪೋಟೋವನ್ನು ತೋರಿಸಲಾಗಿ ಮನೆ ಕಟ್ಟಲು ಮಣ್ಣನ್ನು ಹಾಗೂ ಕಲ್ಲನ್ನು ಹಾಕಿದ್ದು ಅದು ಯಾರ ಜಾಗದಲ್ಲಿ ಎಂದೆರ ಸಾಕ್ಷಿ ಅದು ಹೊಳೆ ದಂಡೆಯಲ್ಲಿಯೇ ಕಲ್ಲು ಮತ್ತು ಮಣ್ಣನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

7. ನಿ.ಪಿ.39 ರ ಪೋಟೋವನ್ನು ತೋರಿಸಲಾಗಿ ಸಾಕ್ಷಿ ಪೋಟೋವನ್ನು ನೋಡಿ ಕಲ್ಲು ಮತ್ತು ಮಣ್ಣನ್ನು ರೋಡಿನ ದಕ್ಷಿಣ ದಿಕ್ಕಿನಲ್ಲಿ ಪ್ರತಿವಾದಿಗಳು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಡಿ. 1 ಪೋಟೋವನ್ನು ತೋರಿಸಿ ಪೋಟೋದಲ್ಲಿ ಕಾಣುವ ಕಟ್ಟಡ ಕೊಟ್ಟಿಗೆ ಇರುತ್ತದೆ, ಅದು ಗಿರಿಜಾರವರ ಕೊಟ್ಟಿಗೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಡಿ. 1 ರಲ್ಲಿ ಕಾಣುವ ರಸ್ತೆ ಅರಾಟೆ ಕಳುವಿನ ಬಾಗಿಲಿಗೆ ಹೋಗುವ ರಸ್ತೆ ಎಂದು ನುಡಿಯುತ್ತಾರೆ. ನಿ.ಡಿ.1 ರಲ್ಲಿ ನಾನು ಹೇಳುವಂತಹ ಗಿರಿಜಾರವರ ಮನೆಯ ಎದುರಿನ ರಸ್ತೆ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಪೋಟೋದಲ್ಲಿ ಕಾಣುವುದಿಲ್ಲ, ಆದರೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಅರಾಟೆ ಕಳುವಿನ ಬಾಗಿಲಿನ ರಸ್ತೆಯಿಂದ

ಗಿರಿಜಾರವರ ಜಾಗದ ಮೂಲೆಯಿಂದ ನಮ್ಮ ಮನೆಗೆ ರಸ್ತೆ ಹೋಗುತ್ತದೆ ಎಂದು ನುಡಿಯುತ್ತಾರೆ.

8. ಸದರಿ ರಸ್ತೆ ಎಷ್ಟು ಅಗಲ ಎಂದು ಗೊತ್ತಿರುವುದಿಲ್ಲ. ನಿ.ಡಿ. 1 ರಲ್ಲಿ ಆ ರಸ್ತೆ ಕಾಣುವುದಿಲ್ಲ ಎಂದರೆ ಸರಿ. ಏಕೆಂದರೆ ಈವರೆಗೆ ರಸ್ತೆ ಮಾಡಿರುವುದಿಲ್ಲ, ಇನ್ನು ಮುಂದೆ ಮಾಡಬೇಕು ಎಂದು ನುಡಿಯುತ್ತಾರೆ.ನಾವು ಹೋಗುವುದು, ಬರುವುದು ಅದೇ ದಾರಿಯಲ್ಲಿ ಎಂದು ನುಡಿಯುತ್ತಾರೆ. ಈಗ ಇರುವುದು ಕಾಲುದಾರಿ, ಇನ್ನು ಮುಂದೆ ರಸ್ತೆ ಮಾಡಬೇಕು ಅಂತ ನುಡಿಯುತ್ತಾರೆ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**